ಆ) ಎಷ್ಟು ಜನ ಕಾರ್ಮಿಕರು ಈ ಕೂಲಿಯನ್ನು ಪಡೆಯುತ್ತಿದ್ದಾರೆ ?

ಇ) ಮೂರನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಇವರಿಗೂ ಅನ್ವಯಿಸಿ ವೇತನ ಪುನರ್ ವಿಮರ್ಶೆ ಮಾಡುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ತೀರ್ಮಾನವೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಆ) ಕನಿಷ್ಠ ವೇತನ ಕಾಯ್ದೆಯ ಪ್ರಕಾರ ಗ್ಯಾಂಗ್ ಕೂಲಿಕಾರರು ಮತ್ತಿತರ ಕಾರ್ಮಿಕರಿಗೆ ರೂ. ೮ ರಿಂದ ರೂ. ೩೫ರವರೆಗೆ ಕನಿಷ್ಠ ವೇತನ ಕೊಡಲಾಗುತ್ತಿದೆ.

ಆ) ೨೫೧೧೬.

ಇ) ಇವರು ಖಾಯಂ ನೌಕರರು ಅಲ್ಲದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪಿ. ಯು. ಸಿ. ಸಿಲೆಬಸ್ಸಿನ ಪ್ರಕಟಣೆ ಬಗ್ಗೆ

೧೭ (೨೭೬) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಆ) ಪಿ. ಯು. ಸಿ. ಮಂಡಲಿಯು ಕೊಡುತ್ತಿದ್ದ ಸಿಲಬಸ್ಸನ್ನು ಇದುವರೆವಿಗೂ ಯಾರು ಮುದ್ರಿಸುತ್ತಿದ್ದರು, ಪ್ರಕಟಿಸುತ್ತಿದ್ದರು ಮತ್ತು ಮಾರಾಟ ಮಾಡುತ್ತಿದ್ದರು ?

ಆ) ಈ ಸಿಲಬಸ್ಸಿನ ಮುದ್ರಣ, ಪ್ರಕಟಣೆ ಮತ್ತು ಮಾರಾಟವನ್ನು ಖಾಸಗಿಯವರಿಗೆ ಕೊಟ್ಟಿರುವುದು ನಿಜವೇ ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಇ) ಹಿಂದಿನಂತೆ ಸರ್ಕಾರ ಪಿ. ಯು. ಸಿ. ಮಂಡಲಿ ಮುದ್ರಿಸಿ, ಪ್ರಕಟಿಸಿ ಮತ್ತು ಮಾರಾಟ ಮಾಡುತ್ತಿದ್ದ ಪದ್ಧತಿಯನ್ನು ಪುನಃ ಜಾರಿಗೆ ತರಲಾಗುತ್ತದೆಯೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಆ) ಸರ್ಕಾರಿ ಪಠ್ಯ ಪುಸ್ತಕ ಮುದ್ರಣಾಲಯದವರು ಮುದ್ರಿಸಿ ಮಾರಾಟಕ್ಕೆ ಬಿಡುಗಡೆ ಮಾಡುತ್ತಿದ್ದರು.

ಆ) ಹೌದು. ಸರ್ಕಾರಿ ಕೇಂದ್ರ ಮುದ್ರಣಾಲಯದ ನಿರ್ದೇಶಕರು ಬೆಂಗಳೂರು ಇವರು ಸದರಿ ಸಿಲಬಸ್ ಪ್ರತಿಗಳನ್ನು ಮುದ್ರಿಸಿ ಮಾರಾಟ ಮಾಡಲು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದರಿಂದ ಹಾಗೂ ಸಕಾಲದಲ್ಲಿ ಸಿಲಿಬಸ್ ಪುಸ್ತಕವನ್ನು ಹೊರತರ ಬೇಕಾದುದರಿಂದ ಖಾಸಗಿಯವರಿಗೆ ವಹಿಸಲಾಯಿತು.

ಇ) ಪರಿಶೀಲಿಸಲಾಗುವುದು.

ಎಸ್. ಎಸ್. ಎಲ್. ಸಿ. ಮತ್ತು ಪಿ. ಯು. ಸಿ. ಪರೀಕ್ಷಾ ಮಂಡಲಿಗಳ ವಿಕೇಂದ್ರೀಕರಣದ ಬಗ್ಗೆ

೧೮ (೨೭೮) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಎಸ್. ಎಸ್. ಎಲ್. ಸಿ. ಮತ್ತು ಪಿ. ಯು. ಸಿ. ವಿದ್ಯಾರ್ಥಿಗಳಿಗನ್ವಯಿಸುವಂತೆ ಬೆಂಗಳೂರಿನಲ್ಲಿ ಒಂದೇ ಒಂದು ಪರೀಕ್ಷಾ ಮಂಡಲಿಯಿರುವುದು ಸರ್ಕಾರದವರಿಗೆ ತಿಳಿದಿದೆಯೇ ?

ಆ) ಇದರಿಂದಾಗಿ ಕಣ್ಣು ಸಣ್ಣ ತಪ್ಪುಗಳಿಗೂ ಸಹ ದೂರದಿಂದ ಬರುವ ವಿದ್ಯಾರ್ಥಿಗಳು ವಿನಾಕಾರಣ ಹಣ ಖರ್ಚು ಮಾಡಿ ತೊಂದರೆಗೀಡಾಗುವ ಪರಿಸ್ಥಿತಿ ಬಂದಿಲ್ಲವೇ ?

ಇ) ಈ ವಿಷಯದ ಬಗ್ಗೆ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ರಾಜ್ಯ ಘಟಕ ಜಾಥಾ ಮಾಡಿ, ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ಸರ್ಕಾರದವರಿಗೆ ತಿಳಿದಿದೆಯೇ ?

ಈ) ಈ ಸಮಸ್ಯೆಯನ್ನು ಬಗೆಹರಿಸಲು ಮಂಡಲಿಯ ವಿಕೇಂದ್ರೀಕರಣ ಮಾಡಬೇಕೆಂದು ಡಾ।। ಹೆಚ್. ನರಸಿಂಹಯ್ಯನವರ ಸಮಿತಿಯು ಶಿಫಾರಸ್ಸು ಮಾಡಿಲ್ಲವೇ ?

ಉ) ವಿದ್ಯಾರ್ಥಿಗಳ ಮತ್ತು ಉಪಧ್ಯಾಯರುಗಳ ತೊಂದರೆಗಳನ್ನು ನಿವಾರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಎಸ್. ಎಸ್. ಎಲ್. ಸಿ. ಮತ್ತು ಪಿ. ಯು, ಸಿ. ವಿದ್ಯಾರ್ಥಿಗಳಿಗೆ ಅನ್ವಯವಾಗುವಂತೆ ಪ್ರತ್ಯೇಕ ಮಂಡಲಿಗಳಿವೆ.

ಆ) ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ) ಈ ಬಗ್ಗೆ ಮಾಹಿತಿ ಇಲ್ಲ.

ಈ) ಮಾಡಿದೆ.

ಉ) ಸಮಿತಿಯ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಹಳ್ಳಿಗಳ ರಸ್ತೆಗಳಿಗೆ ಖರ್ಚಾದ ಹಣದ ಬಗ್ಗೆ

೧೯(೫೦) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಲೊಕೋಪಯೋಗಿ, ಅಚ್ಚು ಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹಳ್ಳಿ ಹೆದ್ದಾರಿಗಳಿಗೆ ಮಂಜೂರಾದ ಹಣವೆಷ್ಟು ?

ಆ) ಶಿರಸಿ–ಸಿದ್ದಾಪುರದ ಹಳ್ಳಿ ಹೆದ್ದಾರಿಗೆ ಖರ್ಚಾದ ಹಣವೆಷ್ಟು ?

ಇ) ಸದರಿ ತಾಲ್ಲೂಕಿನ ಯಾವ ಯಾವ ಹಳ್ಳಿಗಳ ಹೆದ್ದಾರಿಯನ್ನು ದುರಸ್ತಿ ಮಾಡಲಾಗಿದೆ ಹಾಗೂ ಅದಕ್ಕೆ ಖರ್ಚಾದ ಹಣವೆಷ್ಟು ?

ಈ) ದುರಸ್ತಿ ಮಾಡಬೇಕಾದ ಹಳ್ಳಿಯ ರಸ್ತೆಗಳ ವಿವರಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡ ಮತ್ತು ನೀರಾವರಿ ಸಚಿವರು).—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ೧೯೮೬-೮೭ರ ಸಾಲಿನ ಆಯವ್ಯಯದಲ್ಲಿ ಹಳ್ಳಿಯ ಹೆದ್ದಾರಿ ಕಾರ್ಯಕ್ರಮದಲ್ಲಿ ೧೨.೭೦ ಲಕ್ಷ ರೂಪಾಯಿಗಳ ಅನುದಾನವನ್ನು ಒದಗಿಸಲಾಗಿದೆ.

ಆ) ಹಳ್ಳಿ ಹೆದ್ದಾರಿ ಯೋಜನೆಯಲ್ಲಿ ಖರ್ಚಾದ ಹಣ ;

ತಾಲ್ಲೂಕು	೧೯೮೬–೮೭ರ ಅನುದಾನ (ಲಕ್ಷ ರೂಪಾಯಿಗಳಲ್ಲಿ)	ಈ ವರೆಗೆ ಖರ್ಚಾದ ಹಣ ೮೬/೮೭ರಲ್ಲಿ
ಶಿರಸಿ,	೩.೧೫	೨.೦೬
ಸಿದ್ದಾಪುರ	೦.೭೫	೦.೫೪

ಇ) ಹಳ್ಳಿಯ ಹೆದ್ದಾರಿ ಯೋಜನೆಯಲ್ಲಿ ಶಿರಸಿ ಮತ್ತು ಸಿದ್ದಾಪುರ ತಾಲ್ಲೂಕಿನಲ್ಲಿ ತೆಗೆದುಕೊಂಡ ಕೆಲಸಗಳ ಹೆಸರು ಮತ್ತು ಖರ್ಚಾದಹಣ:—

ಕಾಮಗಾರಿಯ ಹೆಸರು	ಇದುವರೆಗೆ ಖರ್ಚಾದ ಹಣ (ಲಕ್ಷ ರೂಗಳಲ್ಲಿ)	ಪರಾ
ಅ) ಶಿರಸಿ ತಾಲ್ಲೂಕಿನ ಮುಗವಳ್ಳಿ ಗ್ರಾಮಕ್ಕೆ ಕೂಡು ರಸ್ತೆ.	೫.೩೭	ಕೆಲಸವು ಪ್ರಗತಿಯಲ್ಲಿದೆ.
ಆ) ಸಿದ್ದಾಪುರ ತಾಲ್ಲೂಕಿನ ಬನ್ನಿಗೆ ಗ್ರಾಮಕ್ಕೆ ಕೂಡು ರಸ್ತೆ.	೨.೦೪	ಕೆಲಸ ಮುಗಿದಿದೆ.